## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 745 (864)

ಸದಸ್ಯರ ಹೆಸರು : **ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಉತ್ತರಿಸುವ ದಿನಾಂಕ : **14.07.2023**

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ರಾಜ್ಯದ ವಿವಿಧೆಡೆಯಿಂದ ಸಲ್ಲಿಸಲ್ಪಡುವ ದೂರುಗಳು, ಸ್ಪಷ್ಟೀಕರಣ ಕೋರಿಕೆ ಪತ್ರಗಳಿಗೆ ಸೂಕ್ತವಾಗಿ ಸ್ಪಂದಿಸಲಾಗುತ್ತಿದೆಯೇ; ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ 2023-24ರ 15ನೇ ಹಣಕಾಸು ಅನುದಾನ ಬಿಡುಗಡೆ ಸಹಿತ ಆಯಾಯ ಜಿಲ್ಲೆಗಳಿಂದ ಸಲ್ಲಿಸಲ್ಪಟ್ಟಿರುವ ಅಗತ್ಯ ವಿಷಯಗಳ ಪತ್ರ ವ್ಯವಹಾರ / ಕೋರಿಕೆಗಳಿಗೆ ಸರಕಾರ ಸ್ಪಂದಿಸಿದೆಯೇ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ರಾಜ್ಯದ ವಿವಿಧೆಡೆಯಿಂದ ಸಲ್ಲಿಸಲ್ಪಡುವ ದೂರುಗಳು, ಸ್ಪಷ್ಟೀಕರಣ ಕೋರಿಕೆ ಪತ್ರಗಳಿಗೆ ಸೂಕ್ತವಾಗಿ ಸ್ಪಂದಿಸಲಾಗುತ್ತಿದೆ.<br>2023-24ನೇ ಸಾಲಿಗೆ ಕೇಂದ್ರ ಸರ್ಕಾರದಿಂದ 15ನೇ ಹಣಕಾಸು ಆಯೋಗ ಅನುದಾನವು ಇಲ್ಲಿಯವರೆವಿಗೂ ಬಿಡುಗಡೆಯಾಗಿರುವುದಿಲ್ಲ. |
| ಆ) | ಗ್ರಾಮೀಣಾಭಿವೃದ್ಧಿ ಇಲಾಖಾ ತಂತ್ರಾಂಶಗಳ ಉನ್ನತೀಕರಣದ ಪ್ರಕ್ರಿಯೆಗಳೇನು; ಪಂಚತಂತ್ರ 2.0 ಜಾರಿ ಮಾಡಿದ ನಂತರ ಆನ್ ಲೈನ್ ಮೂಲಕ ಸೇವೆಯನ್ನು ನೀಡುವಾಗ ಆಸ್ತಿಗಳ ಖಾತೆ ಬದಲಾವಣೆ, ಅಂಗಡಿ ಪರವಾನಗಿ ನವೀಕರಣ, ತೆರಿಗೆ ಪಾವತಿಯ ಕುರಿತಂತೆ ತಾಂತ್ರಿಕ ಮತ್ತು ಆಡಳಿತಾತ್ಮಕ ಪ್ರಾಯೋಗಿಕ, ಸರ್ವರ್ ಇತ್ಯಾದಿ ಸಮಸ್ಯೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪರಿಹಾರ ಕ್ರಮಗಳ ಮಾಹಿತಿ ಒದಗಿಸುವುದು; | ಪಂಚತಂತ್ರ 2.0 ತಂತ್ರಾಂಶವನ್ನು ಉನ್ನತೀಕರಣಗೊಳಿಸಲು ಅನುಸರಿಸಿದ ಪ್ರಕ್ರಿಯೆಗಳು ಈ ಕೆಳಕಂಡಂತಿವೆ.<br>2022-23ನೇ ಸಾಲಿನ ಆರ್ಥಿಕ ವರ್ಷದಲ್ಲಿ 2011 ರಿಂದ ಗ್ರಾಮ ಪಂಚಾಯಿತಿಗಳಲ್ಲಿ ಚಾಲ್ತಿಯಲ್ಲಿದ್ದ ಪಂಚತಂತ್ರ ತಂತ್ರಾಂಶವನ್ನು ಉನ್ನತೀಕರಣಗೊಳಿಸಿ ಅಭಿವೃದ್ಧಿ ಪಡಿಸಲಾಗಿರುವ ಪಂಚತಂತ್ರ 2.0 ತಂತ್ರಾಂಶವನ್ನು ಗ್ರಾಮ ಪಂಚಾಯತಿಗಳ ಪ್ರತಿನಿತ್ಯದ ಕಾರ್ಯಗಳನ್ನು ಮತ್ತು ಕಾರ್ಯಚಟುವಟಿಕೆಗಳನ್ನು ನಿರ್ವಹಣೆ ಮಾಡಲು ಹಾಗೂ ಸೇವೆಗಳ ವಿಲೇವಾರಿಗೆ ಬೇಕಾದ ಯೋಜನೆಗಳ ಅನುಷ್ಠಾನ ಮತ್ತು ತೀರ್ಮಾನಗಳನ್ನು ಕೈಗೊಳ್ಳಲು ಬಳಸಿಕೊಳ್ಳಲಾಗುತ್ತಿದೆ ಹಾಗೂ ಸದರಿ ತಂತ್ರಾಂಶದಲ್ಲಿ ವೈಜ್ಞಾನಿಕ ತೆರಿಗೆ ನಿರ್ಧರಣೆ ಹಾಗೂ ತೆರಿಗೆ ವಸೂಲಾತಿಗಾಗಿ Automation of Property Tax - Module, ಸೇವೆಗಳ ವಿಲೇವಾರಿಗಾಗಿ ನಾಗರೀಕ ಸೇವೆ ಮಾಡ್ಯುಲ್, ನಾಗರೀಕ ಸಹಭಾಗಿತ್ವವನ್ನು ಹೆಚ್ಚಿಸುವ ಸಲುವಾಗಿ ದೂರದೃಷ್ಟಿ ಯೋಜನೆ ಪ್ರಕ್ರಿಯೆಗಳನ್ನು ಸಿದ್ಧಪಡಿಸಲು Planning Module, ಗ್ರಾಮ ಪಂಚಾಯತಿಗಳ ಸಭೆಗಳಲ್ಲಿ ಪಾರದರ್ಶಕತೆ ತರಲು Meeting Management |

| | | |
|---|---|---|
| | | ಮಾಡ್ಯೂಲ್‌ನ್ನು ಅಭಿವೃದ್ಧಿಪಡಿಸಲಾಗಿದೆ.<br>ಪಂಚತಂತ್ರ 2.0 ಜಾರಿ ಮಾಡಿದ ನಂತರ ಆನ್‌ಲೈನ್ ಮೂಲಕ ಸೇವೆಯನ್ನು ನೀಡುವಾಗ ಆಸ್ತಿಗಳ ಖಾತೆ ಬದಲಾವಣೆ, ಅಂಗಡಿ ಪರವಾನಗಿ ನವೀಕರಣ, ತೆರಿಗೆ ಪಾವತಿಯ ಕುರಿತಂತೆ ತಾಂತ್ರಿಕ ಮತ್ತು ಆಡಳಿತಾತ್ಮಕ ಪ್ರಾಯೋಗಿಕ, ಸರ್ವರ್ ಇತ್ಯಾದಿ ಸಮಸ್ಯೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br>ಪರಿಹಾರ ಕ್ರಮಗಳ ಮಾಹಿತಿ ಈ ಕೆಳಕಂಡಂತಿದೆ:<br>**ತೆರಿಗೆ ಸಂಗ್ರಹಣೆ**<br>• ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ ವಸೂಲಾತಿ ಮಾಡಲು ಪಂಚತಂತ್ರ 2.0 ತಂತ್ರಾಂಶದ ಮೊಬೈಲ್ ಆಪ್‌ನ್ನು ಹಾಗೂ PoS machine ಗಳ ಮೂಲಕ ಪಡೆಯಲು ಆಪ್‌ನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗಿದೆ. ಗ್ರಾಮ ಪಂಚಾಯತಿಗಳ ತೆರಿಗೆ ದರ ಮತ್ತು ಫೀಜುಗಳನ್ನು ವಿಧಿಸಲು ಸ್ವಯಂಚಾಲಿತ ತೆರಿಗೆ ಲೆಕ್ಕಾಚಾರ ಮಾಡುವ ವಿಧಾನವನ್ನು ಸೆರೆಹಿಡಿಯಲು Automation of Property Tax ಮಾಡ್ಯೂಲ್ ಅನ್ನು ಅನುಷ್ಠಾನಗೊಳಿಸಲಾಗಿದೆ.<br>• ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ, ದರ ಮತ್ತು ಫೀಜುಗಳನ್ನು ಸಂಗ್ರಹಣೆ ಮಾಡಲು ನಮೂನೆ-3ರಲ್ಲಿ ನಿಗದಿಪಡಿಸಿರುವ ಮ್ಯಾನ್ಯುಯಲ್ ರಶೀದಿಗಳನ್ನು ನೀಡುವ ಬದಲು ಡಿಜಿಟಲ್ ರಶೀದಿಗಳನ್ನು ಸೃಜಿಸಿ, ಸಾರ್ವಜನಿಕರಿಗೆ ನೀಡಲು ಪಂಚತಂತ್ರ 2.0 ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ.<br>**ಬಾಪೂಜಿ ಸೇವಾ ಕೇಂದ್ರ**<br>• ಸಾರ್ವಜನಿಕರು ಬಾಪೂಜಿ ಸೇವಾಕೇಂದ್ರ ತಂತ್ರಾಂಶದ ಮತ್ತು ಬಾಪೂಜಿ ಸೇವಾ ಕೇಂದ್ರ ಮೊಬೈಲ್ ಆಪ್ ಮೂಲಕ ಗ್ರಾಮ ಪಂಚಾಯತಿಗಳ ಆಸ್ತಿತೆರಿಗೆಯನ್ನು ಪಾವತಿಸಲು ಹಾಗೂ ಇಲಾಖೆಯ 17 ಸೇವೆಗಳಿಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ.<br>**ನಾಗರೀಕ ಸೇವೆಗಳ ವಿಲೇವಾರಿ**<br>• ಗ್ರಾಮ ಪಂಚಾಯತಿಗಳಲ್ಲಿ ನಾಗರೀಕರಿಂದ ಸ್ವೀಕೃತವಾಗುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸೇವೆಗಳ ಅರ್ಜಿಗಳನ್ನು ಸಕಾಲ ತಂತ್ರಾಂಶದಲ್ಲಿ ನೋಂದಣಿ ಮಾಡದೇ ಸಕಾಲ ಅಧಿನಿಯಮದ |

ಉಲ್ಲಂಘನೆಯನ್ನು ತಡೆಗಟ್ಟಲು ಸಕಾಲ ಅರ್ಜಿಸಂಖ್ಯೆ (ಜಿ.ಎಸ್.ಸಿ ಸಂಖ್ಯೆ) ಇಲ್ಲದೇ ಮತ್ತು ಪಂಚತಂತ್ರ 2.0 ತಂತ್ರಾಂಶದ "ನಾಗರೀಕ ಸೇವೆಗಳು" ಮಾಡ್ಯುಲ್ ಮೂಲಕ ಅರ್ಜಿಗಳನ್ನು ಪರಿಶೀಲಿಸಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಡಿಜಿಟಲ್ ಸಹಿಯೊಂದಿಗೆ ಪ್ರಮಾಣ ಪತ್ರಗಳನ್ನು ವಿತರಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 17 ಸೇವೆಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳಲ್ಲಿ ನಾಗರೀಕರಿಂದ ಸ್ವೀಕೃತವಾಗುವ ಆನ್-ಲೈನ್ ಅಥವಾ ಲಿಖಿತ ರೂಪದ ಅರ್ಜಿಗಳನ್ನು ಪಂಚತಂತ್ರ 2.0 ತಂತ್ರಾಂಶದಲ್ಲಿ ಅಳವಡಿಸಿ, ಪರಿಶೀಲಿಸಿ ವಿಲೇವಾರಿ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ.

**ದೂರದೃಷ್ಟಿ ಯೋಜನೆ**

- ಗ್ರಾಮ ಪಂಚಾಯತಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ದೂರದೃಷ್ಟಿ ಯೋಜನೆಯ ಸಿದ್ಧಪಡಿಸುವಿಕೆಯ ಎಲ್ಲಾ ಪ್ರಕ್ರಿಯೆಯಗಳನ್ನು ಪಂಚತಂತ್ರ 2.0 ತಂತ್ರಾಂಶದ Planning Module ನಲ್ಲಿ ಅಭಿವೃದ್ಧಿಪಡಿಸಿದ್ದು, ಈ ಪ್ರಕ್ರಿಯೆಗಳಲ್ಲಿ ಪ್ರಮುಖವಾಗಿರುವ ಕೇಂದ್ರಿಕೃತ ಗುಂಪು ಚರ್ಚೆ, ಅಡ್ಡನಡಿಗೆ, ಸಹಭಾಗಿ ಗ್ರಾಮೀಣ ಪರಾಮರ್ಶೆ ಪ್ರಕ್ರಿಯೆಗಳನ್ನು ಮೊಬೈಲ್ ಆಪ್ ಮೂಲಕ ಅಳವಡಿಸಲು ಅವಕಾಶ ನೀಡಲಾಗಿದೆ.
- ಅಭಿವೃದ್ಧಿಪಡಿಸಿ ಚಾಲನೆಗೊಳಿಸಲಾಗಿರುವ Planning Module ಅನ್ನು ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಿಕೊಂಡು ಎಲ್ಲರನ್ನೂ ಒಳಗೊಂಡಂತೆ, ಪಾರದರ್ಶಕವಾಗಿ ಹಾಗೂ ಸಹಭಾಗಿ ಪ್ರಕ್ರಿಯೆಗಳೊಂದಿಗೆ ದೂರದೃಷ್ಟಿ ಯೋಜನೆಯನ್ನು ಯಶಸ್ವಿಯಾಗಿ ಸಿದ್ಧಪಡಿಸಲು ಕ್ರಮವಹಿಸಲಾಗಿದೆ.

**ಗ್ರಾಮ ಪಂಚಾಯತಿಗಳಲ್ಲಿನ ವಿವಿಧ ಸಭೆಗಳು**

- ಗ್ರಾಮ ಪಂಚಾಯತಿಗಳ ಗ್ರಾಮ ಸಭೆ, ವಾರ್ಡ್ ಸಭೆ, ಜನವಸತಿ ಸಭೆ, ಸ್ಥಾಯಿಸಮಿತಿ ಸಭೆ ಮುಂತಾದ ಸಭೆಗಳ ಆಯೋಜಿಸುವಿಕೆ, ಹಾಜರಾತಿ ಮತ್ತು ನಡವಳಿಗಳ ತಯಾರಿಸುವಿಕೆಯಲ್ಲಿ ಪಾರದರ್ಶಕತೆಯನ್ನು ತರುವ ಉದ್ದೇಶದಿಂದ ಪಂಚತಂತ್ರ 2.0 ತಂತ್ರಾಂಶದಲ್ಲಿ Meeting


| | | |
|---|---|---|
| | | Management ಮಾಡ್ಯುಲ್ ಅನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಮಾಡ್ಯುಲ್‌ನ ಮೂಲಕ ಗ್ರಾಮ ಪಂಚಾಯತಿಯ ಸಭೆಗಳ ಡಿಜಿಟಲ್ ಸಭಾಸೂಚನಾ ಪತ್ರಗಳನ್ನು ತಯಾರಿಸಬಹುದಾಗಿದೆ ಮತ್ತು ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳ ಮತ್ತು ಸಿಬ್ಬಂದಿಗಳ ಬಯೋಮೆಟ್ರಿಕ್ ಹಾಜರಾತಿಯನ್ನು ಪಡೆಯಬಹುದಾಗಿದೆ ಹಾಗೂ ಗ್ರಾಮ ಪಂಚಾಯತಿಯ ಸಭೆಗಳ ನಡವಳಿಗಳನ್ನು ತಂತ್ರಾಂಶದ ಮೂಲಕವೇ ತಯಾರಿಸಿ, ಡಿಜಿಟಲ್ ಸಹಿ ಮೂಲಕ ಅನುಮೋದನೆ ನೀಡಲು ಅನುವು ಮಾಡಿಕೊಡಲಾಗಿದೆ.<br>• ಆನ್‌ಲೈನ್ ಮೂಲಕ ಸೇವೆಗಳನ್ನು ನೀಡುವಾಗ ಆಸ್ತಿಗಳ ಖಾತೆ ಬದಲಾವಣೆಗಳ ಬಗ್ಗೆ ದೂರುಗಳು ವರದಿಯಾಗಿದ್ದು, ಆಸ್ತಿಗಳ ಖಾತೆಯ ಇ-ಸ್ವತ್ತು ತಂತ್ರಾಂಶವನ್ನು 2013 ರಿಂದ ಅನುಷ್ಠಾನ ಮಾಡಲಾಗಿದ್ದು, ಇ-ಸ್ವತ್ತು ತಂತ್ರಾಂಶದ ಮೂಲಕ ಆಸ್ತಿ, ಬಾಕಿ ಬದಲಾವಣೆ ಮಾಡಿಸಿಕೊಳ್ಳಲು ನಿರ್ದೇಶನ ನೀಡಲಾಗಿದೆ. ವ್ಯಾಪಾರ ಪರವಾನಗಿ ನವೀಕರಣಕ್ಕೆ ಸಂಬಂಧಿಸಿದ ಬಾಪೂಜಿ ಸೇವಾ ಕೇಂದ್ರ ತಂತ್ರಾಂಶ ಮತ್ತು ಪಂಚತಂತ್ರ 2.0 ತಂತ್ರಾಂಶದಲ್ಲಿ ಪರವಾನಗಿ ನವೀಕರಣ ಮಾಡುವಲ್ಲಿ ಅರ್ಜಿಗಳನ್ನು ಸಲ್ಲಿಸಲು ಹಾಗೂ ಪಡೆಯಲು ಬದಲಾವಣೆ ಮಾಡಲಾಗಿದೆ. ತೆರಿಗೆ ಪಾವತಿ ಕುರಿತಂತೆ ತಾಂತ್ರಿಕ ಸಮಸ್ಯೆಗಳು ಕಂಡುಬಂದಲ್ಲಿ ಪಂಚತಂತ್ರ 2.0 ಸಹಾಯವಾಣಿ ಮೂಲಕ ಬಗೆಹರಿಸಲಾಗುತ್ತಿದೆ.<br>• ಪಂಚತಂತ್ರ 2.0 ತಂತ್ರಾಂಶದಲ್ಲಿ ಅಳವಡಿಸಲಾದ ಸರ್ವರ್ ಗಳಲ್ಲಿ ಯಾವುದೇ ಲೋಪದೋಷಗಳು ಈವರೆಗೆ ಕಂಡುಬಂದಿರುವುದಿಲ್ಲ. ಕಳೆದ ಮೂರು ತಿಂಗಳ Server Utilization ವರದಿಯನ್ನು ಗಮನಿಸಿದಾಗ ಅಂತಹ ಸರ್ವರ್ ಸಮಸ್ಯೆಗಳು ಉಂಟಾಗಿರುವುದು ವರದಿಯಾಗಿರುವುದಿಲ್ಲ. (Server Utilization ವರದಿಯನ್ನು ಲಗತ್ತಿಸಿದೆ) |
| ಇ) | ಪಂಚತಂತ್ರ 2.0 ಅನುಷ್ಠಾನದಲ್ಲಿ ಕಾಲಾನುಕ್ರಮದ ಪ್ರಕ್ರಿಯೆಗಳು ಯಾವುವು; ಗ್ರಾಮ ಪಂಚಾಯತಿಗಳ ವಾಸ್ತವತೆಯನ್ನು ಅರಿಯದೆ ತರಾತುರಿಯಲ್ಲಿ ಪಂಚತಂತ್ರ 2.0ನ್ನು ಜಾರಿ ಮಾಡಿದ್ದರಿಂದ ತಂತ್ರಾಂಶ ಮತ್ತು ಹಿಂದಿನ ದಾಖಲಾತಿಗಳ ಸಮನ್ವಯತೆ ಕೊರತೆಯಿಂದ (ಒಬಿ) ಪ್ರಾರಂಭ ಶುಲ್ಕ ವ್ಯತ್ಯಾಸವಾಗಿರುವುದು ತೆರಿಗೆ ಪರಿಷ್ಕರಣೆ ಹಾಗೂ ಸಾಮಾನ್ಯ ಸಭೆ ನಡೆಸುವಲ್ಲಿ ನೈಜ ಸಮಸ್ಯೆಯಾಗಿರುವುದು | ಪಂಚತಂತ್ರ 2.0 ತಂತ್ರಾಂಶವನ್ನು ನಾಲ್ಕು ಹಂತದಲ್ಲಿ ಮಾಡ್ಯುಲ್‌ವಾರು ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನ ಮಾಡಲಾಗಿದೆ.<br>ಮೊದಲನೇ ಹಂತದಲ್ಲಿ (April-2022)- Admin & user Management,<br>(Revenue collection citizen service module.<br>ಎರಡನೇ ಹಂತದಲ್ಲಿ- Finance & Accounting, HRMS |


| | | |
|---|---|---|
| | ಸರ್ಕಾರದ ಗಮನಕ್ಕೆ ಬಂದಿದೆಯೇ; (ಪರಿಹಾರ ಕ್ರಮಗಳ ಮಾಹಿತಿ ಒದಗಿಸುವುದು) | (July-2022)<br>ಮೂರನೇ ಹಂತದಲ್ಲಿ (August-2022)-Meeting management, Learning management event & Initiative management, Grievance management<br>ನಾಲ್ಕನೇ ಹಂತದಲ್ಲಿ (Nov-2022) - Perspective planning module, SBM (G) module ಗಳನ್ನು ಅನುಷ್ಠಾನಗೊಳಿಸಲಾಗಿದೆ.<br><br>ಪಂಚತಂತ್ರ 1.0 ತಂತ್ರಾಂಶದಲ್ಲಿದ್ದ ಆಸ್ತಿಗಳಿಗೆ ಆಸ್ತಿವಾರು ತೆರಿಗೆ ಪರಿಷ್ಕರಣೆ ಮಾಡದೇ ಆಸ್ತಿ ತೆರಿಗೆಯನ್ನು ವಸೂಲಾತಿ ಮಾಡಲಾಗುತ್ತಿರುವುದು ಕಂಡುಬಂದಿದ್ದು ಸದರಿ ನ್ಯೂನತೆಗಳನ್ನು ಸರಿಪಡಿಸಿ ಪಂಚತಂತ್ರ 1.0 ತಂತ್ರಾಂಶವನ್ನು ಉನ್ನತೀಕರಣಗೊಳಿಸುವ ಸಲುವಾಗಿ ಪಂಚತಂತ್ರ 2.0 ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗಿದೆ. ಅದರಂತೆ ಪಂಚತಂತ್ರ 1.0 ತಂತ್ರಾಂಶದಲ್ಲಿ ಆಸ್ತಿ ತೆರಿಗೆಗೆ ಸಂಬಂಧಿಸಿದ ನ್ಯೂನತೆಗಳನ್ನು ಸರಿಪಡಿಸಲು ಹಾಗೂ ಹಿಂದಿನ ವರ್ಷದ ಬಾಕಿ ಮತ್ತು ಪ್ರಸ್ತುತ ಸಾಲಿನ ಬೇಡಿಕೆಯನ್ನು ನೋಂದಾಯಿಸಲು ಗ್ರಾಮ ಪಂಚಾಯತಿಗಳಿಗೆ ಪಂಚತಂತ್ರ 2.0 ತಂತ್ರಾಂಶದಲ್ಲಿ ಅವಕಾಶ ನೀಡಲಾಗಿದೆ. ಗ್ರಾಮ ಪಂಚಾಯತ್‌ಗಳಲ್ಲಿ ಸಾಮಾನ್ಯ ಸಭೆ ನಡೆಸುವಲ್ಲಿ ಯಾವುದೇ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಈ) | ಪಂಚತಂತ್ರ 2.0 ಆವೃತ್ತಿ ಬಗ್ಗೆ ಕಳೆದ ಏಪ್ರಿಲ್ 2022ರಿಂದ ಈವರೆಗೆ ರಾಜ್ಯದ ಪಂಚತಂತ್ರ ಸಹಾಯವಾಣಿ ಕೇಂದ್ರದಲ್ಲಿ / ಇಲಾಖೆಯಲ್ಲಿ ದಾಖಲಾದ ದೂರುಗಳೆಷ್ಟು; (ಪರಿಹಾರ ಕ್ರಮಗಳ ಸಹಿತ ಜಿಲ್ಲಾವಾರು ವಿವರ ನೀಡುವುದು) | ಪಂಚತಂತ್ರ 2.0 ತಂತ್ರಾಂಶ ಅನುಷ್ಠಾನವಾದ ದಿನಾಂಕ:24.04.2022 ರಿಂದ ಈವರೆಗೆ ಗ್ರಾಮ ಪಂಚಾಯತಿ ಹಾಗೂ ಸಾರ್ವಜನಿಕರಿಂದ ಪಂಚತಂತ್ರ 2.0 ಸಹಾಯವಾಣಿಗೆ ದಾಖಲಾದ ದೂರುಗಳ ಸಂಖ್ಯೆ:3907.<br>**(ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ)** |
| ಉ) | ಗ್ರಾಮ ಪಂಚಾಯತಿಗಳ ಆಡಳಿತಾತ್ಮಕ, ಕಾನೂನಾತ್ಮಕ, ಸಿಬ್ಬಂದಿ ಮತ್ತು ತಾಂತ್ರಿಕ ವಿಷಯಗಳಿಗೆ ಅಧಿಕಾರಿ ಜನಪ್ರತಿನಿಧಿಗಳನ್ನೊಳಗೊಂಡಂತೆ ಸಮನ್ವಯ ಸಭೆ ನಡೆಸಲಾಗಿದೆಯೇ? (ಈವರೆಗಿನ ಜಿಲ್ಲಾವಾರು ಸಭಾನಡವಳಿ ಪ್ರತಿ ನೀಡುವುದು) | ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಭೆಯನ್ನು ಮಾಸಿಕವಾಗಿ ಒಂದು ದಿನ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಕಡ್ಡಾಯವಾಗಿ ಏರ್ಪಡಿಸುವುದು ಮತ್ತು ತಿಂಗಳಿಗೊಮ್ಮೆ ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಭೆಯನ್ನು ಕರೆಯುವುದು.<br><br>ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತ್ರೈಮಾಸಿಕವಾಗಿ ಗ್ರಾಮ ಪಂಚಾಯತಿ |

| | | |
|---|---|---|
| | | ಅಧ್ಯಕ್ಷರು / ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು / ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಯನ್ನು ಕಂದಾಯ ಉಪವಿಭಾಗದನ್ವಯ ಕರೆದು ಪ್ರಗತಿ ಪರಿಶೀಲನೆ, ಅಧಿನಿಯಮ, ಸುತ್ತೋಲೆ, ಅಧಿಸೂಚನೆಗೆ ಸಂಬಂಧಿಸಿದಂತೆ ಎಲ್ಲರಿಗೂ ಮಾಹಿತಿ, ತಿಳುವಳಿಕೆ ಹಾಗೂ ಕಾರ್ಯಕ್ರಮ ಅನುಷ್ಠಾನದಲ್ಲಿ ಪ್ರಗತಿಪರ ಚಿಂತನೆ ನಡೆಸುವಂತೆ ಕೆಳಸ್ತರದ ಎಲ್ಲಾ ಅಧಿಕಾರಿಗಳಿಗೆ ಮನೋಸ್ಥೈರ್ಯ ತುಂಬಲು ಹಾಗೂ ಪ್ರಗತಿ ಪರಿಶೀಲನೆ ನಡೆಸಲು ಕ್ರಮವಹಿಸುವಂತೆ ಈಗಾಗಲೇ ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. |

**ಸಂಖ್ಯೆ: ಗ್ರಾಅಪಂರಾ 242 ಜಿಪಸ 2023**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು.





| | | | |
|---|---|---|---|
| 8 | 23.4 G | 8 | 3 |








| | | | |
|---|---|---|---|
| 1.9 | 80 | 66 | 0.02 |




8
23.4 G
4
3
1.3
17
68
0

| ಅನುಬಂಧ | | |
|---|---|---|
| **DISTRICT_NAME** | **NO_OF_GRIEVANCES_RECEIVED** | **NO_OF_GRIEVANCES_Resolved** |
| BAGALKOTE | 25 | 6 |
| BALLARI | 19 | 12 |
| BELAGAVI | 25 | 21 |
| BENGALURU | 2656 | 1677 |
| BENGALURU RURAL | 402 | 239 |
| BIDAR | 9 | 7 |
| CHAMARAJANAGARA | 7 | 3 |
| CHIKKABALLAPURA | 78 | 44 |
| CHIKKAMAGALURU | 22 | 18 |
| CHITRADURGA | 11 | 10 |
| DAKSHINA KANNADA | 115 | 92 |
| DAVANAGERE | 4 | 3 |
| DHARWAR | 17 | 14 |
| GADAG | 7 | 6 |
| HASSAN | 22 | 18 |
| HAVERI | 6 | 5 |
| KALABURAGI | 9 | 5 |
| KODAGU | 15 | 12 |
| KOLAR | 69 | 48 |
| KOPPAL | 13 | 5 |
| MANDYA | 52 | 36 |
| MYSURU | 100 | 75 |
| RAICHUR | 4 | 0 |
| RAMANAGARA | 64 | 38 |
| SHIVAMOGGA | 45 | 13 |
| TUMAKURU | 37 | 24 |
| UDUPI | 34 | 29 |
| UTTARA KANNADA | 17 | 9 |
| VIJAYANAGAR | 11 | 8 |
| VIJAYAPURA | 7 | 6 |
| YADGIR | 5 | 3 |
| **TOTAL** | **3907** | **2486** |